ತಿಪ್ಪನನ್ನಾದರೂ ಚೆನ್ನಾಗಿ ಓದಿಸುವ ಆಸೆಯನ್ನು ಹೊತ್ತು ಮುಂದಾದ. ಅಜ್ಜಿ, ತಾತನ ಆಸೆಯಂತೆ ಹುಟ್ಟಿದ ಮೊದಲ ಮಗುವಿಗೆ ಮನೆದೇವರಾದ ತಿಪ್ಪೇರುದ್ರಸ್ವಾಮಿಯ ಹೆಸರನ್ನೇ ಇಡಲಾಗಿತ್ತು. ತಿಪ್ಪ ಮನೆಯವರ ಕಣ್ಮಣಿಯಾಗಿದ್ದ. ಹಿಂದೆ ಇಬ್ಬರು ತಂಗಿಯರು. ಕುಪ್ಪಣ್ಣ ಮಗನನ್ನು ಸರೀಕರು ಸೇರಿಸಿದಂತೆ ಸರ್ಕಾರಿ ಕನ್ನಡ ಶಾಲೆಗೆ ಸೇರಿಸದೇ ಉಳ್ಳವರು ಹೋಗುವ ಇಂಗ್ಲಿಷ್ ಮೀಡಿಯಮ್ ಸ್ಕೂಲಿಗೆ ಸೇರಿಸಿದ. ಮಗನ ಮೇಲೆ ಜೀವವನ್ನೇ ಇಟ್ಟುಕೊಂಡಿದ್ದ ಹೆಂಡತಿ ಗಿರಿಜೆ... 'ಇಷ್ಟು ದಿನಾ ದುಡ್ಡು... ದುಡ್ಡು ತಮ್ಮಂಗೆ ಸುರಿದದ್ದಾತು. ಇನ್ನ ಮಗಂಗಾ?' ಎಂದು ವ್ಯಂಗ್ಯವಾಗಿ ಕೇಳಿದಳು. ಅವಳಿಗೆ ದ್ವಂದ್ವ. ಮಗ ಓದಿ ಎಲ್ಲಿ ಮೈದುನನಂತಾಗುತ್ತಾನೋ ಎಂಬ ಹೆದರಿಕೆ ಒಂದೆಡೆಯಾದರೆ, ಮಗ ದೊಡ್ಡ ಮನುಷ್ಯನಾಗುವ ಆಸೆ ಮತ್ತೊಂದೆಡೆ. ಆದರೆ ಅಜ್ಜಿ, ತಾತ ಮಾತ್ರ ಯೂನಿಫಾರ್ಮ್, ಶೂಸು ತೊಟ್ಟು ಸ್ಕೂಲಿಗೆ ಹೊರಟ ಮೊಮ್ಮಗನನ್ನು ಕಣ್ತುಂಬಿಕೊಂಡು 'ಮಾರಾಜ... ಮಾರಾಜ ಇದ್ದಂಗವ್ನೆ' ಎಂದು ನೆಟಿಕೆ ಮುರಿಯುತ್ತಿದ್ದರು. ಬಣ್ಣ ನಸುಗಪ್ಪಾದರೂ ಕಣ್ಣು, ಮೂಗು ಲಕ್ಷಣವಾಗಿದ್ದ ತಿಪ್ಪ ಸುಂದರನಾಗಿದ್ದೂ ನಿಜವಿತ್ತು. ಕುಪ್ಪಣ್ಣ ಕಷ್ಟಪಟ್ಟಾದರೂ ಮಗನ ಫೀಸು ತುಂಬಿ ಪುಸ್ತಕ ಇತ್ಯಾದಿಗಳಿಗೆ ಕಡಿಮೆಯಾಗದಂತೆ ದುಡ್ಡು ಒದಗಿಸಿದ. ಅದೇ ಭಾಗ್ಯ ಅವನ ತಂಗಿಯರಿಗೆ ಲಭ್ಯವಾಗಲಿಲ್ಲ. ಅವರು ನೆರೆಹೊರೆಯ ಮಕ್ಕಳ ಜೊತೆಗೆ ಸರ್ಕಾರಿ ಕನ್ನಡ ಶಾಲೆಯ ಮೆಟ್ಟಿಲೇರಿದರು. ತಿಪ್ಪನಿಗೂ ಮೊದಮೊದಲು ಸ್ಕೂಲಿಗೆ ಸಿದ್ಧವಾಗಿ ಹೊರಟಾಗ ಕೇರಿಯ ಮಕ್ಕಳೆಲ್ಲ ನೋಡುತ್ತಿದ್ದ, ಕೈ ಬೀಸುತ್ತಿದ್ದ ದೃಶ್ಯ ಸಂತೋಷ ತರುತ್ತಿತ್ತು. ಅಪ್ಪನ ಸೈಕಲ್ ಮೇಲೆ ಕುಳಿತು ತಾನೂ ಕೈ ಬೀಸುತ್ತಿದ್ದ. ಕ್ರಮೇಣ ಯಾರದೋ ಹಳೆಯ ಬೈಕ್ ದೊರೆತ ನಂತರ ಬೈಕ್ ಮೇಲೆ ಜಂಬೂಸವಾರಿ ಹೊರಡುತ್ತಿತ್ತು. ಆದರೆ ಇದೆಲ್ಲ ಸಡಗರ ಅವನು ಸ್ಕೂಲು ಸೇರುವವರೆಗೆ ಮಾತ್ರ.

ಸ್ಕೂಲು ಸೇರಿದ ಮೇಲೆ ವಾತಾವರಣವೇ ಬೇರೆಯಾಗುತ್ತಿತ್ತು. ಆಕಾಶದಿಂದ ಎತ್ತಿ ಪ್ರಪಾತಕ್ಕೆಸೆದ ಸ್ಥಿತಿ ತಿಪ್ಪನದು. ಇಂಗ್ಲಿಷ್‌ನಲ್ಲೇ ಮಾತನಾಡಬೇಕೆಂಬ ಆಜ್ಞೆ ಶಿಕ್ಷೆಯಾಗುತ್ತಿತ್ತು. ಅವನು ಒಂದು ಮಾತನಾಡಿದರೂ, ಕೊಂಚ ತಪ್ಪಿದರೂ ಎಲ್ಲರ ನಗು ದೊಡ್ಡದಾಗಿ ಕೇಳಿಸುತ್ತಿತ್ತು. ಅದಕ್ಕೆ ತಿಪ್ಪ ಮೌನಕ್ಕೆ ಶರಣಾದ. ಬಾಯಿ ತೆರೆಯುವುದಕ್ಕೇ ಹೆದರಿದ. ಮೇಲಾಗಿ 'ಟೂ ವನ್ ಜ ಟೂ' ಎಂಬ ಟೇಬಲ್‌ಗಳು, ಸಮಾಜಶಾಸ್ತ್ರ ಮತ್ತು ವಿಜ್ಞಾನದ ಉದ್ದುದ್ದ ಉತ್ತರಗಳು ಅವನನ್ನು ಕಂಗೆಡಿಸುತ್ತಿದ್ದವು. ಹೇಗೊ ಕೊಂಚ ಸುಧಾರಿಸಿಕೊಂಡು ತನ್ನಂತೆಯೇ ಇದ್ದ ಒಂದಿಬ್ಬರು ಹುಡುಗರೊಂದಿಗೆ ಅನಿವಾರ್ಯವಾಗಿ ಬೆರೆತ. ಅವರು ತರುವ ತಿಂಡಿ–ಊಟಗಳು ತಿಪ್ಪನ ರಾಗಿ ಮುದ್ದೆ, ಮೊಸರನ್ನವನ್ನು ಅಣಕಿಸುತ್ತಿದ್ದವು. ಪ್ರತಿ ಬಾರಿಯೂ ಅವನನ್ನು ಅನಿವಾರ್ಯವಾಗಿ ಎತ್ತಿ ಮುಂದಿನ ತರಗತಿಗೆ ಸಾಗಿಸಬೇಕಾಗುತ್ತಿತ್ತು. ಟೀಚರ್ ಒಮ್ಮೆ ಕರೆದು ಸಮಸ್ಯೆಯನ್ನು ವಿವರಿಸಿದಾಗ ಕುಪ್ಪಣ್ಣ ಕಣ್ಕಣ್ಣು ಬಿಟ್ಟ.

ಟ್ಯೂಷನ್‌ಗೆ ಮಗನನ್ನು ಸೇರಿಸಿದಾಗ ಸ್ವಲ್ಪ ಸ್ವಲ್ಪ ಅರ್ಥವಾಗಿ ಉಸಿರು ಬಿಡುವಂತಾಯಿತು ತಿಪ್ಪನಿಗೆ. ಇದ್ದ ಗೆಳೆಯರು ಬೇರೆ ಊರಿಗೆ ಹೊರಟು ಹೋದಾಗ ಮತ್ತದೇ ಏಕಾಂಗಿತನ. ಓದು ಎಂದರೆ ಬೆಚ್ಚಿ ಬೀಳುವ ಮನಸು. ಹತ್ತನೇ ತರಗತಿಯ ಪರೀಕ್ಷೆ ಕೊಟ್ಟು ಬಂದಿದ್ದರೂ ಪಾಸಾಗುವುದೂ ಅಸಾಧ್ಯ ಎಂದರಿವಾಗಿತ್ತು ಅವನಿಗೆ. ಮನೆಯಲ್ಲಿ ಅವನ ಸುತ್ತ ಹೆಣೆದ ಕನಸುಗಳ ಸಾಮ್ರಾಜ್ಯ ಅವನನ್ನು ಅಧೀರನನ್ನಾಗಿಸಿತು. ಅವನ ಇಷ್ಟದ ಪ್ರಶ್ನೆಯೇ ಇರಲಿಲ್ಲ. ಕುಪ್ಪಣ್ಣ ಮಗನ ಫಲಿತಾಂಶಕ್ಕಾಗಿ ಎದುರು ನೋಡುತ್ತ ಅವನನ್ನು ಕಾಲೇಜು ಸೇರಿಸಲು ಕಾತುರನಾಗಿದ್ದಾಗ ತಿಪ್ಪ ಕಾಣೆಯಾಗಿದ್ದ. ಕುಪ್ಪಣ್ಣ ತುಮಕೂರಿನ ಮೂಲೆಮೂಲೆಯೆಲ್ಲ ಹುಡುಕಿದ್ದ. ಊರೂರು ಅಲೆದು ಸುಸ್ತಾಗಿದ್ದ. ಗಿರಿಜವ್ವ ಒಬ್ಬನೇ ಮಗನನ್ನು ನೆನೆದು ಹಲುಬದ ದಿನವೇ ಇಲ್ಲ. ತಂಗಿಯರೂ ಅತ್ತು ಸೊರಗಿದರು. ಪೊಲೀಸ್ ಕಂಪ್ಲೇಂಟ್ ಕೂಡ ಕೊಟ್ಟಾಗಿತ್ತು. ಆದರೆ ಮುತ್ತುಸ್ವಾಮಿ ಮತ್ತವನ ಪತ್ನಿ ಈ ಆಘಾತವನ್ನು ತಡೆದುಕೊಳ್ಳಲಿಲ್ಲ. ವಯಸ್ಸು, ಅನಾರೋಗ್ಯದಿಂದ ಮೊದಲೇ ಹಣ್ಣಾದವರು ಕೆಲವೇ ದಿನಗಳ ಅಂತರದಲ್ಲಿ ಅದೇ ನೋವಿನಲ್ಲೇ ಪ್ರಾಣ ಬಿಟ್ಟಿದ್ದರು. ಸಂಸಾರವೇ ಹಳಿ ತಪ್ಪಿದಂತಾಗಿತ್ತು. ಕುಪ್ಪಣ್ಣ ಕಾಂಟ್ರಾಕ್ಟರ್‌ಗೆ ವಿನಂತಿಸಿಕೊಂಡು ಬೆಂಗಳೂರಿನಲ್ಲಿ ನಿರ್ಮಾಣವಾಗುತ್ತಿದ್ದ ದೊಡ್ಡ ಕಟ್ಟಡದ ಕೆಲಸಕ್ಕೆಂದು ಸಂಸಾರಸಮೇತನಾಗಿ ಬೆಂಗಳೂರಿಗೆ ಬಂದು ಬಿಟ್ಟ. ಅಂದು ಕಾಣೆಯಾಗಿದ್ದ ತಿಪ್ಪ ಕುಪ್ಪಣ್ಣನ ಮುಂದೆ ಕಾಣಿಸಿಕೊಂಡಿದ್ದು ಇಂದೇ. ಅದೂ ಕೆಲಸಗಾರನಾಗಿ.

ಕಾಫಿ ಯಾವಾಗಲೋ ಮುಗಿದಿತ್ತು. ಹಿಂದಿನ ಕತೆ ಇನ್ನೂ ಉಳಿದೇ ಇತ್ತು. ಮೊಹಮ್ಮದ ಬಂದು 'ಎಲ್ಲ ಬಾಕ್ಸಗಳನ್ನೂ ಇಟ್ಟೈತೆ' ಎಂದಾಗ ವಾಸ್ತವಕ್ಕೆ ಮರಳಿದ ಕುಪ್ಪಣ್ಣ ವ್ಯಾನ್‌ನತ್ತ ನಡೆದ. ಎದೆಯಲ್ಲಿ ಕೊಂಚ ಕಳವಳ. ಮಗ ತನ್ನನ್ನು ನೋಡಿ ಮತ್ತೆ ಎಲ್ಲಾದರೂ ಓಡಿದ್ದರೆ? ಇಲ್ಲ... ಸುಸ್ತಾಗಿ ಬೆವರುತ್ತ ಮೆಟ್ಟಿಲ ಮೇಲೆ ಕುಳಿತಿದ್ದ ಮಗನನ್ನು ನೋಡಿ ಸಮಾಧಾನವಾದರೂ ಕರುಳು ಚುರ್ ಎಂದಿತು. ತನ್ನಂತಹ ಕೆಲಸ ಮಗನಿಗೆ ಬೇಡ. ಸೂಟು ಬೂಟಿನಲ್ಲಿ ಓಡಾಡುತ್ತ ಬಿಳಿ ಕಾಲರ್ ಕೆಲಸ ಮಾಡಲಿ ಎಂದು ಬಯಸಿದರೆ ಮಗ ಮತ್ತೆ ತನ್ನ ವೃತ್ತಿಯನ್ನೇ ಆರಿಸಿಕೊಂಡಿದ್ದ. ಸಿಮೆಂಟಿನ, ಮಣ್ಣಿನ ದೂಳಿನಲ್ಲಿ ಮುಳುಗೇಳುವ, ಇಟ್ಟಿಗೆ–ಜಲ್ಲಿಕಲ್ಲುಗಳ ಮಧ್ಯೆ ಜಬ್ಬಿಹೋಗುವ ಕೆಲಸ. ಈಗಲೂ ಏನಾದರೂ ಮಾಡಬಹುದಾ? ಗೊತ್ತಿಲ್ಲ. ಎಲ್ಲ ಡಬ್ಬಗಳನ್ನೂ ಎಣಿಸಿ ನೋಡಿ ತೃಪ್ತನಾದ. ತಕ್ಷಣ ಮಾದೇಶ, 'ನೀನು ಗಾಡಿ ಒಳಗೆ ಮಾಲು ಜೊತೆಗೇ ಹೋಗು. ಮೊಮ್ಮದ... ನೀನು ಗಾಡಿ ಮೇಲೆ ವ್ಯಾನ್ ಹಿಂದೆ ಹೋಗು. ಹೊಸಾ ಹುಡುಗ ಅದು. ನಾನು ಈ ಹುಡುಗನ್ನ ಜೊತೆಗೆ ಹೋಗಿ ಜಲ್ಲಿಕಲ್ಲು ಸಿಕ್ರೆ ಹಾಕಿಸಿಕೊಂಡು ಬತ್ತೀನಿ' ಎಂದ. ಗಾಡಿ ಮತ್ತು ಮೊಹಮ್ಮದ ಹೊರಡುತ್ತಿದ್ದಂತೆ ಮಗನನ್ನು ಹಿಂದೆ ಕೂರಿಸಿಕೊಂಡು ಬೈಕ್ ಏರಿದವನು ಸೀದಾ ಬಂದು ಪಾರ್ಕಿನಲ್ಲಿ ಮರದ ನೆರಳಿನಲ್ಲಿ ಕುಳಿತ. ತಿಪ್ಪ ಮಾತ್ರ ಅವನ ಮುಂದೆ ತಲೆ ಕೆಳಗೆ ಹಾಕಿ ನಿಂತೇ ಇದ್ದ.

'ಹ್ಞೂಂ... ಕುಂತ್ಕಾ. ಈಗೇಳು. ನಿನಗೇನಾಗ್ಲಾ ಬಂದಿತ್ತು ದೊಡ್ಡ ರೋಗ? ಹೇಳದೇ ಕೇಳದೇ ಬಿಟ್ಟು ಓಡಿ ಹೋಗಾಕೆ?' ಎಂದು ತನ್ನ ಆಕ್ರೋಶವನ್ನೆಲ್ಲ ಹೊರಗೆ ಹಾಕುವನಂತೆ ಪಕ್ಕಕ್ಕೆ ಥೂ ಎಂದು ಉಗಿದ. ನಿಧಾನಕ್ಕೆ ಕುಳಿತ ತಿಪ್ಪ ಅವನೆಣಿಸಿದಂತೆ ತಲೆ ತಗ್ಗಿಸಿ ಅಳಲಿಲ್ಲ. 'ಇನ್ನೇನ್ಮಾಡ್ಬೇಕಾಗಿತ್ತು? ನನ್ನ ಕೈಲಿ ಆ ಇಂಗ್ಲಿಷ್ ಜೊತೆ ಏಗಕ್ಕಾಯ್ತಿರಲಿಲ್ಲ. ನಿಮಗೆಲ್ಲ ದೊಡ್ಡ ಸಂಭ್ರಮ. ಮಗ ಇಂಗ್ಲಿಷ್ ಸ್ಕೂಲಿಗೆ ಹೋಗಬೇಕು. ಓದಿ ಬರದು ದೊಡ್ಡ ಸಾಹೇಬ ಆಗಬೇಕು ಅಂತ. ಆದ್ರೆ ಮನೇಲಿ ಒಬ್ರೂ ಇಂಗ್ಲಿಷ್ ಮಾತಾಡೋರಿಲ್ಲ. ನಿಮಗ್ಯಾರಿಗೂ ಗಂಧ, ಗಾಳೀನೆ ಇಲ್ಲ. ನಂಗೆ ಹೇಳ್ಕೊಡೋರೊಬ್ರೂ ಇಲ್ಲ. ತಪ್ಪಿದ್ರೂ ನೆಪ್ಪಿದ್ರೂ ಗೊತ್ತಾಗಲ್ಲ. ಸ್ಕೂಲಲ್ಲಿ ಎಲ್ಲಾ ಶ್ರೀಮಂತರ ಮಕ್ಕಳು. ನನ್ನ ಹೆಸರಿನಿಂದ ಹಿಡಿದು ಎಲ್ಲಾದಕ್ಕೂ ಗೇಲಿ ಮಾಡೋರು. ತಿಪ್ಪೆ ಅಂತ ಕೂಗೋರು. ಲೆಕ್ಕ ತಪ್ಪಿದ್ರೆ ನಗೋದು. ನಾನ್ ಏನ ಮಾತಾಡಿದ್ರೂ ಅದರಲ್ಲಿ ತಪ್ಪು ಕಂಡು ಹಿಡಿದು ಇಡೀ ಕ್ಲಾಸೇ ಜೋರಾಗಿ ನಗ್ತಾ ಇತ್ತು. ಅದಕ್ಕೆ ನಾನು ಮಾತಾಡೋದೇ ಬಿಟ್ಬಿಟ್ಟೆ. ಒಂದಿನಾ ಅಲ್ಲ... ಎರಡ್ದಿನಾ ಅಲ್ಲ... ವರ್ಷಗಟ್ಲೆ ಇದೇ ಕತೆ. ಟೀಚರ್‌ಗೊಳು ಹಂಗೇಯಾ. ಒಬ್ಬಿಬ್ಬರು ಕ್ಲಾಸ್‌ನ ಗದರಸೋರು. ಉಳಿದವರೆಲ್ಲಾ ಅವರ ಜೊತೇನೆ ನಕ್ಕು ಹೋಗೋರು. ನನ್ನ ಡಬ್ಬೀಲಿ ರಾಗಿ ಮುದ್ದೆ ನೋಡಿ ಮೂಗು ಮುರಿಯೋದು... ಒಟ್ನಲ್ಲಿ ನಾನು ಅಪಹಾಸ್ಯದ ವಸ್ತುವಾಗ್ಬಿಟ್ಟೆ' ಎಂದು ತೀವ್ರವಾಗಿ ಹೇಳಿದ. ಕಣ್ಣುಗಳು ಕೆಂಡ ಕಾರುತ್ತ ಅಪ್ಪನನ್ನೇ ನೋಡುತ್ತಿದ್ದವು.

ಕುಪ್ಪಣ್ಣನಲ್ಲಿ ಅಚ್ಚರಿ–ಕುತೂಹಲ ಮೇಳೈಸಿತ್ತು. ಮಗನ ಶಾಲಾ ಜೀವನದ ಇನ್ನೊಂದು ಮಗ್ಗುಲ ಪರಿಚಯ ಅವನಿಗಿರಲಿಲ್ಲ. ಮಗನ ಸ್ಕೂಲ್ ಫೀಸಿಗೆ ದುಡ್ಡು ಹೊಂದಿಸುವುದೇ ದೊಡ್ಡ ಕೆಲಸವಾಗಿತ್ತಲ್ಲ. ಉಳಿದವುಗಳ ಯೋಚನೆ ಬರಲೇ ಇಲ್ಲ. 'ಅವರಿಗೆಲ್ಲ ನನ್ನ ಕಂಡ್ರೆ ತಾತ್ಸಾರ. ಬಡವ, ದಡ್ಡ... ಅಂತೆಲ್ಲ ಸಸಾರವಾಗೋಗ್ಬಿಟ್ಟೆ. ಅವರು ಹೋಗೊ ಪಿಕ್ಚರ್‌ಗೊಳು, ಹೋಟಲ್‌ಗೊಳು, ಪಾರ್ಟಿಗೊಳು... ಬರೀ ಅದರ ಬಗ್ಗೇನೇ ಮಾತಾಡೋರು. ನಂಗೆ ನಮ್ಮನೆ ಪರಿಸ್ಥಿತಿ ಗೊತ್ತು. ನಾನೇನೂ ಕೇಳೋ ಹಾಗೇ ಇರಲಿಲ್ಲ. ಅದಕ್ಕೇ ನಾನು ಅವರ ದೃಷ್ಟೀಲಿ ನಾಲಾಯಕ್ಕು. ಏನಾದರೂ ಕಳುವಾದರೆ ಆಪಾದನೆ ನನ್ನ ಮೇಲೆ ಹೊರಿಸೋಕೆ ನೋಡೋರು. ಏನಾದರೂ ಭಾರವಾದದ್ದನ್ನ ಹೊರೊ ಕೆಲಸಾ ಇದ್ರೆ ಹೇಳೋರು. ಟೀಚರ್‌ಗಳು ಆಗಾಗ 'ಬ್ರಿಂಗ್ ಯುವರ್ ಪೇರೆಂಟ್ಸ' ಅನ್ನೋರು. ಮನೇಲಿ ಅದನ್ನ ಹೇಳೋ ಹಾಗಿರಲಿಲ್ಲ. ಹೇಳಿದ್ರೂ ಅವ್ವ ಯಾವುದಕ್ಕೂ ಬತ್ತಿರಲಿಲ್ಲ. ನೀವು ನಿಮ್ಮ ಕೆಲಸಗಳಲ್ಲೇ ಮುಳುಗಿ ಓಗಿದ್ರಿ. ನೀನು ಯಾವಾಗಲೋ ಒಮ್ಮೆ ಬಂದ್ರೂ ಕತ್ತಾಡಿಸಿ ಓಗ್ತಿದ್ದೆ. ಸಂಜೆ ಓದೋ ಟೇಮಲ್ಲಿ ಸುತ್ತೆಲ್ಲಾ ಜನ ಕುಡಿದು ಬರೋರು. ಹೊಡೆಯೋದು... ಬಡಿಯೋದು... ಅಳೋದು ಎಲ್ಲಾ ನಾಟಕ ಶುರವಾಗೋದು. ಅಂಥದ್ರಲ್ಲಿ ನಾನೇನು ಓದಬೇಕು? ಅದು ತಪ್ಪು... ಇದು ತಪ್ಪು... ಅಂತ ಬೈಸಿಕೊಂಡು, ಹೊಡೆಸಿಕೊಂಡು ಮೈಯೆಲ್ಲ ದಡ್ಡು ಬಿದ್ದು